3729 (4062) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) :
ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ತುರುವೇಕೆರೆ ತಾ॥ ಮಾಯಾಸಂದ್ರ ಹೋಬಳಿ, ತುಯಲಹಳ್ಳಿ ಗ್ರಾಮದಲ್ಲಿ ಪ್ರೌಢಶಾಲೆ ತೆರೆಯಲು ಮನವಿ ಸಲ್ಲಿಸಿರುವುದು ನಿಜವೇ;

ಆ. ಹಾಗಿದ್ದರೆ, ಇದರ ಬಗ್ಗೆ ಕೈಗೊಂಡ ಕ್ರಮವೇನು;

ಇ. ತುರುವೇಕೆರೆ ತಾಲ್ಲೂಕಿನಲ್ಲಿ ಕಾಂಪೋಜಿಟ್ ಜೂನಿಯರ್ ಕಾಲೇಜು ಇರುವುದು ನಿಜವೇ;

ಈ. ಇಲ್ಲಿ 800 ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸುಮಾರು 5 ರಿಂದ 6 ಕೊಠಡಿಗಳು ಹೆಚ್ಚಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ. ಈ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಏನು ಕ್ರಮ ಕೈಗೊಳ್ಳಲಾಗಿದೆ ವಿವರ ನೀಡುವುದು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ. ಹೌದು.

ಆ. ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆ ನಡೆಯುತ್ತಿದೆ.

ಇ. ಹೌದು.

ಈ.ಉ. ಬಂದಿದೆ. ಸದರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ 2005–06ನೇ ಸಾಲಿನಲ್ಲಿ ಎರಡು ಕೊಠಡಿಗಳ ನಿರ್ಮಾಣಕ್ಕಾಗಿ Rural Infrastructure Development Fundರಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

3730 (4063) : ಶ್ರೀ ಕೃಷ್ಣಪ್ಪ ಎಂ.ಟಿ (ತುರುವೇಕರೆ):
ಶ್ರೀ ಅಂಜನಮೂರ್ತಿ (ವಸತಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ತುರುವೇಕೆರೆ ತಾಲ್ಲೂಕಿನ ಸಾವಿರಾರು ಜನರಿಗೆ ಮನೆಗಳಿಲ್ಲದೆ ನಿರ್ಗತಿಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಅವರುಗಳಿಗೆ ಇಲ್ಲಿಯವರೆಗೆ ಆಶ್ರಯ ಹಾಗೂ ಇಂದಿರಾ ಆವಾಸ್ ಮನೆಗಳನ್ನು ಮಂಜೂರು ಮಾಡದೇ ಇರಲು ಕಾರಣವೇನು;

ಇ. ಇದರ ಬಗ್ಗೆ ಕೈಗೊಂಡ ಕ್ರಮವೇನು;